ಹನಿಗಳು ಬಾಯೊಳಗೆ ಬೀಳುವಾಗ ಮುಗಿಲಮ್ಮನ ಎದೆಹಾಲೆಂದು ಗುಟುಕರಿಸುತ್ತೇನೆ. ಚಕ್ಕಲಬಕ್ಕಲ ಹಾಕಿ ಧ್ಯಾನಕ್ಕೆ ಕೂರುತ್ತೇನೆ. ಮನಸ್ಸು ನಿರಾಳಸ್ಥಿತಿಗೆ ಹೋಗಿ ಮಳೆಸುಖವನ್ನು ತುಂಬಿಕೊಳ್ಳುತ್ತದೆ. ಹೀಗೆ ಜಲಸಮಾಧಿಯಲ್ಲಿರುವಾಗ ಕೆಳಗಿನಿಂದ 'ಏ! ನೆನೀಬ್ಯಾಡಾ' ಎಂಬ ಅಲಾರಾಂ ಬಾರಿಸುತ್ತದೆ. ಆಗ ನನ್ನ ಕೋಡಂಗಿಯಾಟಕ್ಕೆ ತೆರೆ ಬೀಳುತ್ತದೆ. ಬಾನುವಿನ ಚಿಂತೆ ನನ್ನ ನೆಗಡಿಯದಲ್ಲ. ನನ್ನನ್ನು ದವಾಖಾನೆಗೆ ಎಳೆದುಕೊಂಡು ಹೋಗುವುದು. ನಾನು ಕೆಟ್ಟದಾಗಿ ಮುಲುಕುತ್ತೇನಂತೆ. ಪರದೆಗಳಲ್ಲಿ ಮೂಗೊರೆಸುತ್ತೇನಂತೆ. ಇವೆಲ್ಲ ಅಪರಾಧವೇ? ದೊಡ್ಡ ಮನುಷ್ಯರು ತುಂಬಿದ ಸಭೆಯಲ್ಲಿ ಕರವಸ್ತ್ರದ ಬದಲು ಪಂಚೆಯ ಚುಂಗಿನಿಂದ ನಾಸಿಕ ಶುದ್ಧಿಗೊಳಿಸುವುದಿಲ್ಲವೇ? ನನ್ನ ಪ್ರಕಾರ ನೆಗಡಿ ಮನುಷ್ಯರು ಮಳೆಗೆ ಹೆದರಿಕೆಯಿಂದ ಸಲ್ಲಿಸುವ ಗೌರವ.

ನನ್ನ ಮನೋರಮೆಯೇನೂ ಮಳೆ ವಿರೋಧಿಯಲ್ಲ. ಅದನ್ನು ಒಳಗಿದ್ದೇ ನೋಡಬೇಕು ಎಂಬ ತತ್ವದವಳು. 'ವರ್ಷಾಕಾಲದೊಳೊಂದು ದೆವಸಂ' ನಾನೂ ಅವಳೂ ಕಾರ್ಗಾಲ ಅನುಭವಿಸಲೆಂದೇ ಕೊಡಗಿನಲ್ಲಿ ಬಿಡಾರ ಹೂಡಿದ್ದೆವು. ಅದೊಂದು ಕಾಫಿತೋಟದ ಮನೆ. ಬೆಟ್ಟದ ತುದಿಯಲ್ಲಿ ಕಟ್ಟಿದ್ದು 360 ಡಿಗ್ರಿ ತಿರುಗಿ ನೋಡುವಂತಿತ್ತು. ಸೂರ್ಯನಿದ್ದಾಗ ಕೆಳಗಿನ ಕಣಿವೆ, ಪಟದಲ್ಲಿ ಚಿತ್ರ ಬಿಡಿಸಿದಂತೆ ಕಾಣುತ್ತಿತ್ತು. ಮಳೆಯಲ್ಲಿ ಕಾಡು ಬೆಟ್ಟ ಕಮರಿಗಳ ಮೇಲೆ ಜಲದವಕುಂಠನ ಎಳೆದಂತೆ ತೋರುತ್ತಿತ್ತು. ಅಹೋರಾತ್ರಿ ಪತಪತ ಜೋಗುಳ. 'ಹಂ ತುಂ ಏಕ ಕಮರೇ ಮೇ ಬಂದಹೊ'. ಸೂರ್ಯ ಯಾವಾಗ ಹುಟ್ಟಿದನೊ ಮುಳುಗಿದನೊ ಗೊತ್ತಾಗಲೊಲ್ಲದು. ಮತ್ತೊಂದು ಮಳೆಗಾಲ ಜೋಗದಲ್ಲಾಯಿತು. ನಾವಿದ್ದ ಮೂರೂ ದಿನ ನಮ್ಮ ಕೋಣೆಯ ಕಿಟಕಿಯಿಂದ ಸಣ್ಣದೊಂದು ಹಸಿರುಟ್ಟ ಬೆಟ್ಟ ಕಾಣುತ್ತಿತ್ತು. ಅದರ ನೆತ್ತಿಯ ಮೇಲಿದ್ದ ಏಕೈಕ ಗಿಡವೊಂದು ಅರಿಸಿಣ ಮೀಯುವ ಮದುಮಗನಂತೆ ನಿಂತಿತ್ತು. ಅದು ಅದರ ಸೌಭಾಗ್ಯವೊ ಶಾಪವೊ ತಿಳಿಯದು.

ಮನೆಯೊಳಗೆ ಬೆಚ್ಚಗಿದ್ದು ಹೊರಜಗತ್ತು ತೋಯುವುದನ್ನು ಪ್ರೇಕ್ಷಕರಾಗಿ ನೋಡುವುದಕ್ಕಿಂತ, ಮಳೆ ನಾಟಕದಲ್ಲಿ ಸ್ವತಃ ಪಾತ್ರಧಾರಿಗಳಾಗುವ ಪಾಡೇ ಬೇರೆ. ಬಾಲ್ಯದಲ್ಲಿ ಹೊಲದಿಂದ ಬರುವಾಗ ಸಂಜೆಮಳೆಗೆ ಸಿಕ್ಕಿಕೊಳ್ಳುತ್ತಿದ್ದುದುಂಟು. ಆಗ ಮೈಯಲ್ಲಿ ಕಸುವಿರಲಿಲ್ಲ. ದುಡಿತದಿಂದ ದಣಿದ ದೇಹ. ಯಾವಾಗ ಮನೆಗೆ ಬಿದ್ದೇನೊ, ಒದ್ದೆಕಳಚಿ ಬೆಚ್ಚಗಿನ ಬಟ್ಟೆಯುಟ್ಟು ಒಲೆಯ ಮುಂದೆ ಕೂತು ಹಬೆಯಾಡುವ ಸಾರು ಬಿಡಿಸಿಕೊಂಡು ಮುದ್ದೆ ಮುರಿವೆನೊ ಎಂದು ಜೀವ ಕಾತರಿಸುತ್ತಿತ್ತು. ಆಷಾಢದ ಗಾಳಿ ಬೀಸಿ ಬೀಸಿ ಹೊಡೀತಿದ್ದರೆ ಹೇಸಿ ನನ್ನ ಜೀವ ಹೆಣ್ಣಾಗಿ ಯಾಕ ಹುಟ್ಟಲಿಲ್ಲ ಅಂತಿತ್ತಂತ ಗಂಡಿನ ಜೀವ. ಗಂಡಾಳಿಕೆಯ ಸಮಾಜದಲ್ಲಿ ತಾತ್ಕಾಲಿಕವಾಗಿ ಹೆಣ್ಣಾಗಲು ಬಯಸುವ ಚೋದ್ಯವಿದು. ಆದರೆ ಚಾರಣದಲ್ಲಿ ಮಳೆಯ ಮುಖಾಬಿಲೆಗೆ ಮನಸನ್ನೂ ದೇಹವನ್ನೂ ತಯಾರಿಟ್ಟೇ ಹೋಗುವುದರಿಂದ ಪರಿತಪಿಸುವ ಬಾಬತ್ತಿಲ್ಲ. ಬಹುಶಃ ಹಿಮಾಲಯದ ನಮ್ಮ ಯಾವ ಏರಾಟವೂ ಮಳೆಯಿಲ್ಲದೆ ಮುಗಿದಿಲ್ಲ. ಅಲ್ಲಿ ಮಳೆ ಮನಬಂದ ಗಿರಾಕಿ. ಯಾವಾಗಲೂ ಬರಬಹುದು. ನೆತ್ತಿಗೆ ತಾಕುವಂತೆ ಕಾರ್ಮೋಡಗಳು ಬಂದು ಕೊಡವೆತ್ತಿ ಸುರಿಯುತ್ತವೆ. ಕುಂಭದ್ರೋಣ, ಮುಸಲಧಾರೆ ನುಡಿಗಟ್ಟುಗಳ ಅರ್ಥವೇನೆಂದು ಮನದಟ್ಟು ಮಾಡಿಸುತ್ತವೆ. ಹಾಗೆಂದು ದಿನಗಟ್ಟಲೆ ಸುರಿಯದು. ಫುಟಬಾಲ್ ಪಂದ್ಯದಂತೆ ಬೇಗನೆ ಮುಗಿಯುತ್ತದೆ. ಬಳಿಕ ಶುರುವಾಗುತ್ತದೆ ಕಾಣಿ ಎಲುಬಿನ ಮಜ್ಜೆಯೊಳಗೂ ನುಸುಳಿ ನಡುಗಿಸುವ ಪ್ರಾಣಘಾತಕ ಥಂಡಿ. ಮೈಕೈ ಮರಗಟ್ಟಿ ಥರಥರ. ಹಲ್ಲು ಕಟಕಟ. ಸೆಟೆದ ಕೈಬೆರಳು ಮುಷ್ಟಿಯೊಳಗೆ ಸೇರಲು ತಾಸಾದರೂ ಬೇಕು. ಮಲೆನಾಡ ಮಳೆಯಲ್ಲಿ ಥಂಡಿಯಿದ್ದರೂ ಕೊಲ್ಲುಚಳಿಯಿಲ್ಲ. ಕೊಡಚಾದ್ರಿಯ ಮಳೆಚಾರಣ ನೆನಪಾಗುತ್ತಿದೆ.

ಬೀದಿಯ ದನಗಳಂತೆ ಗೋರ್ಕಲ್ಲುಗಳಂತೆ ಇದ್ದ ನಮ್ಮ ಮೇಲೆ ಕರೆದು ಅದೇ ದಣಿಯಿತು. ಅಲ್ಲಿ ನಮ್ಮನ್ನು ಹೆದರಿಸಿದ್ದು ರಪರಪಿಸಿದ ಧಾರೆಯಲ್ಲ. ಖಡಕಡಾಲ್ ಸಿಡಿಲಲ್ಲ. ಪಾದಸೇವಕರಾಗಿ ಮೆಲ್ಲಗೆ ಬಂದು ನೆತ್ತರ ಹೀರಿದ ಇಂಬಳಗಳು. ಬೇಸಿಗೆಯಲ್ಲಿ ಎಲ್ಲಡಗಿರುತ್ತವೆಯೊ, ನೆಲದೊಳಗಿಂದ ಪುತಪುತನೆ ಮೈತಳೆದು ಸೊಂಡಿಲಾಡಿಸುತ್ತ ಆಕ್ರಮಣಕ್ಕೆ ಸಿದ್ಧವಾಗುತ್ತವೆ. ಮಾಯದಂಥ ಒಂದು ಮಳೆ ಭೂಮಿಯ ಮೇಲಿನ ಎಷ್ಟೊಂದು ಜೀವಗಳ ಆವರ್ತನದ ಲಯವನ್ನು ಉದ್ಘಾಟಿಸುತ್ತದೆ!

ಮಲೆನಾಡ ಸೆರಗಿನಲ್ಲಿ ಹುಟ್ಟಿ ಬೆಳೆದ ನಾನು ಬರ ಕಂಡಿದ್ದು ಕಮ್ಮಿ. ಆದರೆ ಮಳೆ ತಳುವಿದಾಗ, ಬಿತ್ತಿದ ಬೆಳೆ ಒಣಗತೊಡಗಿದಾಗ, ನಮ್ಮಲ್ಲೂ ಹಾಹಾಕಾರ ಶುರುವಾಗುತ್ತಿತ್ತು. ಆಗ ಒನಕೆ ಮುಂಡಿಗೆ ಕಟ್ಟಿದ ಕಪ್ಪೆಯನ್ನು ಹೊತ್ತು, ಅರೆಬೆತ್ತಲೆಯಾಗಿ ಮನೆಮನೆಗೆ ಹೋಗಿ ತಣ್ಣೀರು ಹಾಕಿಸಿಕೊಳ್ಳುತ್ತಿದ್ದೆವು. 'ಮುಲ್ಲಮುಮಾನಿ' ಹಾಡುತ್ತಿದ್ದೆವು. ಬಿಸಿಲ ತಾಪದಿಂದ ಶಾನೇ ಬಳಲಿದ್ದ ಮುಲ್ಲಮುಮಾನಿಗೆ ನಮಾಜು ಮಾಡಲು ಅಂಗಶುದ್ಧಿಗೂ ನೀರಿರಲಿಲ್ಲವಂತೆ. ಅವರ ನೀರಿನ ಕುಂಭ ಒಡೆಯಿತಂತೆ. ಆಗ ಹನ್ನೆರಡು ವರ್ಷದ ಮಳೆ ಒಮ್ಮೆಲೇ ಬಂತಂತೆ. ಈ ಮುಲ್ಲಮುಮಾನಿ ಯಾರೋ ಏನೋ? ಕುಂಭ ಒಡೆಯುವುದು ಪ್ರಾಣಾರ್ಪಣೆಯ ಸಂಕೇತವಿದ್ದರೂ ಇದ್ದೀತು. ನಾವು ಈ ಬಗ್ಗೆ ತಲೆಕೆಡಿಸಿಕೊಳ್ಳದೆ, ಬೀದಿಯಲ್ಲಿ ಎತ್ತಿದ ತರಕಾರಿ ಅಕ್ಕಿ ಮಸಾಲೆ ಬಳಸಿ ಅಟ್ಟು ತಿನ್ನುವುದರಲ್ಲಿ ತನ್ಮಯವಾಗುತ್ತಿದ್ದೆವು. ಮಕ್ಕಳು, ಮೂಗಪ್ರಾಣಿ, ಬತ್ತಿದ ಕೆರೆ, ಬಾಡಿದ ಬಾಳೆ ಮತ್ತು ಹೂವಿನ ತೋಟಗಳನ್ನು ಸಾಕ್ಷಿಯಾಗಿಟ್ಟು ಮುಗಿಲಿಗೆ ಮೊರೆಹೋಗುವ ರಿವಾಜುಗಳು ಎಲ್ಲೆಡೆ ಇವೆ. ಒಂದು ಹಾಡಲ್ಲಂತೂ ಗುಳೆ ಹೋಗುವವವರು ಎಳೆಗೂಸನ್ನು ಮಾರುವ ಸನ್ನಿವೇಶವಿದೆ. ಮಲೆನಾಡಿಗರು 'ರೈನ್ ರೈನ್ ಗೋ ಅವೇ' ಹಾಡಿಯಾರು; ಬಯಲ ಸೀಮೆಯವರು ಮಾತ್ರ 'ಹುಯ್ಯೊಹುಯ್ಯೋ ಮಳೆರಾಯ', 'ಯಾತಕ್ಕೆ ಮಳೆಹೋದವೋ ಶಿವಶಿವಾ ಲೋಕ ತಲ್ಲಣಿಸುತಾವೇ' ಎಂದೇ ಹುಯ್ಯಲಿಡುವರು. 'ನಿಲ್ಲಿ ಮೋಡಗಳೆ ಎಲ್ಲಿ ಓಡುವಿರಿ ನಾಕು ಹನಿ ಸುರಿಸಿ' ಎಂದು ಹಾಡಿದ ಕವಿ ಕೂಡ ಮಲೆನಾಡವರಲ್ಲ. ನಾನಾದರೂ ಹಂಪಿ ಸೀಮೆಗೆ ವಲಸೆ ಬಂದ ಬಳಿಕವೇ, ಜನ ತನುಗೊಡ ಹೊರುವ, ಜೋಕುಮಾರನನ್ನು ತಿರುಗಾಡಿಸುವ, ಕಾರ್‌ಹಬ್ಬ ನೆರವೇರಿಸುವ ಆಚರಣೆಗಳನ್ನು ಕಂಡೆ. ಕಾರ್ ಎಂದರೆ ಉಗುಳು. ಮಳೆ ಆಗಸನೆಂಬ ವ್ಯಾಸೋಚ್ಛಿಷ್ಟ ತಾನೇ?

ಮಳೆಗಾಗಿ ಮಂದಿ ಎಷ್ಟೇ ಮೊರೆಯಿಡಲಿ, ಅದು ಸ್ವಸಮಾಧಾನಕ್ಕಷ್ಟೆ. ವಾಸ್ತವವಾಗಿ ಭೂಮಿಯನ್ನು ಆವರಿಸಿ ತೀಡುವ ವಾಯುವಿನ ಚಲನೆಗಳಿಂದ ಸಂಭವಿಸುವ ಋತುಮಾನಗಳಿಗೆ ಅವುಗಳದ್ದೇ ಲಯವಿದೆ. ಅವು ತಮ್ಮ ಸಹಜಲಯ ಕಳೆದುಕೊಂಡಾಗ, ಬರವಾಗಿ ಮೇಘಸ್ಫೋಟವಾಗಿ ನೆರೆಯಾಗಿ ಕಾಡಿಸುತ್ತವೆ. ಪ್ರಕೃತಿಯ ರಹಸ್ಯ ಮನುಕುಲಕ್ಕೆ ಪೂರಾ ದಕ್ಕಿಲ್ಲ. ಹೀಗಾಗಿಯೇ ಅದು ಕಾರಣಿಕ, ವಿರಾಟಪರ್ವದ ಪಠಣ, ಕತ್ತೆಯ

